(ಇಂದು ದಿನಾಂಕಃ 05-07-2025 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು -ಪ್ರತಿವಾದಿ ಪರ ಶ್ರೀ ಎಂ.ಎನ್.ಎಸ್ ವಕೀಲರಿಂದಃ**

ದಾವಾ ಸ್ಥಳದ ಸರ್ವೇ ನಂಬರ್.638/ಅ, ಹಿಸ್ಸಾ.2 ಆಗಿರುತ್ತದೆ. ದಾವಾ ಸ್ಥಳದಿಂದ 200 ಮೀಟರ್ ದೂರದಲ್ಲಿ ಅಳ್ವೆಕೋಡಿಯಲ್ಲಿ ನಮ್ಮ ಮನೆ ಹಾಗೂ ಆಸ್ತಿ ಇರುತ್ತದೆ. ನಾನು ಕಳೆದ 18 ವರ್ಷಗಳಿಂದ ಕಡೆಕೋಡಿಯಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿರುತ್ತೇನೆ. ದಾವಾ ಸ್ಥಳವು ವಾದಿಯವರಿಗೆ ಅವರ ತಂದೆಯಿಂದ ಬಂದಿರುತ್ತದೆ. ವಾದಿಯವರ ತಂದೆಯ ಹೆಸರು ರಾಯಾ ನಾರಾಯಣ ಶೇಟ್ ಆಗಿರುತ್ತದೆ. ವಾದಿಯವರ ತಂದೆ ಹಾಗೂ ಸಹೋದದರರ ನಡುವೆ ಆಗಿರುವ ವಾಂಟಣಿ ದಸ್ತಾವೇಜನ್ನು ನಾನು ನೋಡಿದ್ದು ಇರುವುದಿಲ್ಲ, ಸಾಕ್ಷಿ ಮುಂದುವರಿದು ವಾಂಟಣಿ ಕಾಲಕ್ಕೆ ನಾನು ಹಾಜರಿದ್ದೆ. ಸದರಿ ವಾಂಟಣಿ ದಸ್ತಾವೇಜು ನೋಂದಣಿ ಕಾಲಕ್ಕೆ ನಾನು ಹಾಜರು ಇರಲಿಲ್ಲ. ದಾವಾ ಸ್ಥಳದ ಸರ್ವೇ ನಂಬರ್.638/ಅ, ಹಿಸ್ಸಾ.2ರ ಪೈಕಿ 8 ಗುಂಟೆ ಕ್ಷೇತ್ರವನ್ನು ವಾದಿಯವರ ತಂದೆಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಸ್ಥಳದ ಸರ್ವೇ ನಂಬರ್.638/ಅ, ಹಿಸ್ಸಾ.2ರಲ್ಲಿ 9 ಗುಂಟೆ ಕ್ಷೇತ್ರ ವಾದಿಯ ತಂದೆಯ ಸಹೋದರರಾರದ ಗಜಾನನ ನಾರಾಯಣ ಶೇಟ್ ರವರ ಪಾಲಿಗೆ ಹೋಗಿರುತ್ತದೆ. ಗಜಾನನ ನಾರಾಯಣ ಶೇಟ್ ರವರ ಜಮೀನಿನ ಎದುರುಗಡೆ ನಮ್ಮ ಜಾಗ ಇರುತ್ತದೆ. ನಮ್ಮ ಹಾಗೂ ಗಜಾನನ ನಾರಾಯಣ ಶೇಟ್ ರವರ ಮಧ್ಯದಲ್ಲಿ ರಾಷ್ಟ್ರೀಯ ಹೆದ್ದಾರಿ ಇರುತ್ತದೆ. ಗಜಾನನ ನಾರಾಯಣ ಶೇಟ್ ರವರ ಪಾಲಿಗೆ ಬಂದ 9 ಗುಂಟೆ ಕ್ಷೇತ್ರದಲ್ಲಿ ದಾವಾ ಸ್ಥಳದ ಸರ್ವೇ ನಂಬರ್.638/ಅ, ಹಿಸ್ಸಾ.2ಅ ಎಂದು ಪ್ರತ್ಯೇಕವಾಗಿ ಕೊಟ್ಟಿರುತ್ತಾರೆ ಎಂದರೆ ಸರಿ. 1998ನೇ ಇಸವಿಯಲ್ಲಿ ಸರ್ವೇ ನಂಬರ್.638/ಅ, ಹಿಸ್ಸಾ.2ಅ, 2ಬ, 2ಕ ಎಂದು ಪೊಡಿಯಾಗಿರುತ್ತದೆ. ಪ್ರತಿವಾದಿಯವರ ತಂದೆಯವರು ಒಂದು ಗುಂಟೆ 8 ಆಣೆ ಜಾಗವನ್ನು ಗಜಾನನ ನಾರಾಯಣ ಶೇಟ್ ರವರಿಂದ ಖರೀದಿ ಮಾಡಿರುತ್ತಾರೆ. ನಾನು ವಾದಿಯವರ

ಹಾಗೂ ಗಜಾನನ ನಾರಾಯಣ ಶೇಟ್ ರವರ ಹಕ್ಕಿನ ಸ್ಥಳದ ಜಾಗವನ್ನು ನೋಡಿರುತ್ತೇನೆ. ಗಜಾನನ ನಾರಾಯಣ ಶೇಟ್ ರವರ ಜಾಗದ ಉತ್ತರ ದಿಕ್ಕಿನಲ್ಲಿ ಪ್ರತಿವಾದಿಯವರ ಮನೆ ಹಾಗೂ ಜಾಗ ಇರುತ್ತದೆ ಎಂದರೆ ಸರಿ. ರಾಷ್ಟ್ರೀಯ ಹೆದ್ದಾರಿಯಿಂದ ಪ್ರತಿವಾದಿಯವರ ಮನೆಗೆ ಹೋಗಲು ವಾದಿಯವರ ಕುಟುಂಬಕ್ಕೆ ಸೇರಿದ ಗದ್ದೆ ಇರುವ ಜಾಗದ ಮೂಲಕ ಪ್ರತಿವಾದಿಯವರು ಹೋಗುತ್ತಿದ್ದರು ಎಂದರೆ ಸರಿಯಲ್ಲ. ವಾದಿಯವರ ಹಕ್ಕಿನ ಸ್ಥಳವು ಗದ್ದೆ ಪ್ರದೇಶವಾಗಿದ್ದು, ಅದು ತಗ್ಗಿನಲ್ಲಿ ಇತ್ತು ಎಂದರ ಸರಿ. ಗಜಾನನ ನಾರಾಯಣ ಶೇಟ್ ರವರು ತನ್ನ ಹಕ್ಕಿನ 9 ಗುಂಟೆಯಲ್ಲಿ 5 ಗುಂಟೆ ಸ್ಥಳವನ್ನು ಗೋವಿಂದ ಚಿದಂಬರ್ ಮೇಸ್ತರವರಿಗೆ ಹಾಗೂ 2 ಗುಂಟೆ ಸ್ಥಳವನ್ನು ಅರುಣ ಗೋವಿಂದ ಮೇಸ್ತರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮಾರಾಟ ಮಾಡುವ ವಿಷಯವನ್ನು ಕೇಳಿರುತ್ತೇನೆ ಎಂದು ನುಡಿದಿರುತ್ತಾರೆ. ಗೋವಿಂದ ಚಿದಂಬರ್ ಮೇಸ್ತರವರು ಹಾಗೂ ಅರುಣ ಗೋವಿಂದ ಮೇಸ್ತರವರು ಖರೀದಿ ಮಾಡಿದ ಜಾಗದಲ್ಲಿ ಮಣ್ಣು ತುಂಬಿ ಭಾಗಯ್ತಾ ಸ್ಥಳ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಗಜಾನನ ನಾರಾಯಣ ಶೇಟ್ ರವರು ಮೊದಲೇ ಮಣ್ಣು ತುಂಬಿದ್ದು, ಗೋವಿಂದ ಚಿದಂಬರ್ ಮೇಸ್ತರವರು ಹಾಗೂ ಅರುಣ ಗೋವಿಂದ ಮೇಸ್ತರವರು ಖರೀದಿ ಮಾಡಿದ ನಂತರ ಭಾಗಯ್ತಾ ಮಾಡಿರುವುದಾಗಿ ನುಡಿದಿರುತ್ತಾರೆ. ವಾದಿಯವರ ಹಕ್ಕಿನ ಸ್ಥಳದ ಗದ್ದೆ ಜಾಗದಲ್ಲಿ ನೀರು ತುಂಬಿ ಪ್ರತಿವಾದಿಯವರ ಹಕ್ಕಿನ ಸ್ಥಳಕ್ಕೆ ಹೋಗಲು ದಾರಿ ಇಲ್ಲದೇ ಇರುವುದರಿಂದ, ಪ್ರತಿವಾದಿಯವರ ತಂದೆಯವರು ಗಜಾನನ ನಾರಾಯಣ ಶೇಟ್ ರವರಿಂದ 1 ಗುಂಟೆ 8 ಆಣೆ ಸ್ಥಳವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಪ್ರತಿವಾದಿಯವರ ತಂದೆಯವರು ದಾರಿಯ ಉದ್ದೇಶಕ್ಕೋಸರ ಸದರಿ 1 ಗುಂಟೆ 8 ಆಣೆ ಸ್ಥಳವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ತಂದೆಯವರು 12-06-2013ರಲ್ಲಿ 1 ಗುಂಟೆ 8 ಆಣೆ ಸ್ಥಳವನ್ನು ಗಜಾನನ ನಾರಾಯಣ ಶೇಟ್ ರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಜಾಗ ಖರೀದಿ ಮಾಡುವ ಕಾಲಕ್ಕೆ ಗದ್ದೆ ಆಗಿತ್ತು ಎಂದರೆ ಸರಿಯಲ್ಲ. 2000ನೇ ಇಸವಿಯಲ್ಲಿ ಗಜಾನನ ನಾರಾಯಣ ಶೇಟ್ ರವರು ಪ್ರತಿವಾದಿಯವರ ತಂದೆಯವರಿಗೆ ಮಾರಾಟ ಮಾಡುವ ಕಾಲಕ್ಕೆ

ಸದರಿ ಜಾಗದಲ್ಲಿ ಮಣ್ಣು ತುಂಬಿದ್ದು ಇರುತ್ತದೆ. ಅರುಣ ಗೋವಿಂದ ಮೇಸ್ತರವರು ಖರೀದಿ ಮಾಡಿದ ಜಾಗಕ್ಕೆ ಪಗಾರವನ್ನು ಹಾಕಿರುತ್ತಾರೆ ಎಂದರೆ ಸರಿಯಲ್ಲ.

**(ಬೆಳಗಿನ ಸಮಯ ಮುಗಿದಿರುವುದವರಿಂದ ಪ್ರತಿವಾದಿಯ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ

(ಇಂದು ದಿನಾಂಕಃ 05-07-2025 ರಂದು 03-30 ಗಂಟೆಗೆ ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು -ಪ್ರತಿವಾದಿ ಪರ ಶ್ರೀ ಎಂ.ಎನ್.ಎಸ್ ವಕೀಲರಿಂದಃ**

ವಾದಿಯವರ ಕುಟುಂಬದ ಸರ್ವೆ ನಂಬರ್.638/ಅ, ಹಿಸ್ಸಾ.2ರ ದಕ್ಷಿಣ ದಿಕ್ಕಿನಲ್ಲಿ ಪಂಚಾಯತಿ ರಸ್ತೆ ಹೋಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯು ವಾದಿಯವರ ಕುಟುಂಬದ ಸರ್ವೆ ನಂಬರ್.638 ಹಿಸ್ಸಾ.2ರ ಮೂಲಕ ಹೋಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಡಿ-3ನ್ನು ತೋರಿಸಲಾಗಿ ಸದರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿಯಿಂದ ಹಾದು ಹೋಗಿರುವ ಪಂಚಾಯತಿ

ರಸ್ತೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿಗೆ ನಿಡಿ-3ನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ರಸ್ತೆಯ ಬಲಭಾಗದಲ್ಲಿ ಕಾಣುವ ಗೇಟಿನ ಒಳಭಾಗದಲ್ಲಿರುವ ಸ್ಥಳವು ಪ್ರತಿವಾದಿಯವರ ಹಕ್ಕಿನ ಸ್ಥಳವೆಂದರೆ ಸರಿಯಲ್ಲ. ನಿಡಿ-4ರಲ್ಲಿ ಕಾಣುವ ಗೇಟು ಪ್ರತಿವಾದಿಯವರು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಗೇಟನ್ನು ಪ್ರತಿವಾದಿಯವರು ಬಲತ್ಕಾರವಾಗಿ ಹಾಕಿರುವುದಾಗಿ ನುಡಿದಿರುತ್ತಾರೆ. ನಿಡಿ-4ರಲ್ಲಿ ಗೇಟಿನ ಎಡಭಾಗದಲ್ಲಿ ಕಾಣುವ ಕಾಂಪೌಂಡ್ ಅರುಣ ಗೋವಿಂದ ಮೇಸ್ತರವರು ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅರುಣ ಗೋವಿಂದ ಮೇಸ್ತ ರವರು ನಿಡಿ-4ರಲ್ಲಿ ಕಾಣುವ ಗೇಟಿನ ಎಡಭಾಗದಲ್ಲಿರುವ ಕಾಂಪೌಂಡನ್ನು ಜಾಗ ಖರೀದಿ ಮಾಡಿದ ನಂತರ ಭಾಗಯ್ತಾವನ್ನಾಗಿ ಪರಿವರ್ತಿಸುವ ಪೂರ್ವದಲ್ಲೇ ಅವರೇ ನಿರ್ಮಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸದರಿ ಪಗಾರವನ್ನು ವಾದಿಯವರೇ ನಿರ್ಮಿಸಿರುತ್ತಾರೆ ಎಂದು ನುಡಿದಿರುತ್ತಾರೆ. ನಿಡಿ-4ರಲ್ಲಿ ಗೇಟಿನ ಎಡಭಾಗದಲ್ಲಿ ಕಾಣುವ ಪಗಾರವನ್ನು ವಾದಿಯವರು ನಿರ್ಮಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-4ರಲ್ಲಿ ಕಾಣುವ ಒಂದು ಗುಂಟೆ 8 ಆಣೆ ಸ್ಥಳವನ್ನು ಪ್ರತಿವಾದಿಯವರ ತಂದೆಯವರು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಾಗವನ್ನು ಖರೀದಿ ಮಾಡಿದ ನಂತರ ಪ್ರತಿವಾದಿಯವರ ತಂದೆಯವರು ಮಣ್ಣು ತುಂಬಿ ಗೇಟನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. 2013ನೇ ಇಸವಿಯಲ್ಲಿ ಪ್ರತಿವಾದಿಯವರ ತಂದೆಯವರು ಮಣ್ಣು ತುಂಬಿ ಗೇಟಿನ ಬಲಭಾಗದಲ್ಲಿ ಕಲ್ಲನ್ನು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-4ರಲ್ಲಿ ಕಾಣುವ ಜಾಗದಲ್ಲಿ ನಾನು ಮಣ್ಣು ತುಂಬಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವಾದಿಯವರಿಂದ ಮಣ್ಣು ತುಂಬಿದ್ದ ಬಗ್ಗೆ ಹಣವನ್ನು ಪಡೆದಿರುತ್ತೇನೆ. ವಾದಿಯವರಿಂದ ಸದರಿ ಮಣ್ಣಿಗೆ ಹಣ ತೆಗೆದುಕೊಂಡ ಬಗ್ಗೆ ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ನಿಡಿ-4ರಲ್ಲಿ ಕಾಣುವ ಜಾಗಕ್ಕೆ ಪ್ರತಿವಾದಿಯವರು 2013ನೇ ಇಸವಿಯಲ್ಲಿ ಮಣ್ಣು ಹಾಕಿರುತ್ತಾರೆಯೇ ಹೊರತು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ವಾದಿಯವರು 2016ನೇ ಇಸವಿಯಲ್ಲಿ ಸದರಿ ಮಣ್ಣು ಹಾಕ್ಕಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ಥಳವನ್ನು ಜೂನ್ ತಿಂಗಳ 2017ನೇ ಇಸವಿಯಲ್ಲಿ ವಾದಿಯವರು ಮೋಜಣಿ ಮಾಡಿಸಿದ್ದು ಇರುತ್ತದೆ. ದಿನಾಂಕ ಗೊತ್ತಿಲ್ಲ. ಮೋಜಣಿ ಮಾಡುವ ದಿನದಂದು ನನ್ನನ್ನು ವಾದಿಯವರು ಕರೆದಿದ್ದು ಇರುತ್ತದೆ. ಸಾಕ್ಷಿಯು ಮುಂದುವರಿದು ನನಗೆ ವಾದಿಯವರಿಂದ ಮಣ್ಣು ಹಾಕಿದ ಹಣ ಬರಬೇಕಾಗಿರುವುದರಿಂದ ಸದರಿ ದಿನ ನಾನು ದಾವಾ ಸ್ಥಳಕ್ಕೆ ಹೋಗಿರುತ್ತೇನೆ. ಮೋಜಣಿಯನ್ನು ಎಷ್ಟು ಗಂಟೆಗೆ ಮಾಡಿರುತ್ತಾರೆ

ಎಂದು ನನಗೆ ನೆನಪಿಲ್ಲ. ವಾದಿಯವರ ಹಕ್ಕಿನ ದಾವಾ ಸ್ಥಳವಾದ ಸರ್ವೇ ನಂಬರ್.638/ಅ, ಹಿಸ್ಸಾ.2ಬ 8ಗುಂಟೆ ಕ್ಷೇತ್ರವನ್ನು ಭೂಮಾಪಕರು ಮೊಜಣಿ ಮಾಡಿದ್ದು ಇರುತ್ತದೆ. ಮೊಜಣಿ ಮಾಡುವ ಕಾಲಕ್ಕೆ ಪ್ರತಿವಾದಿಯವರು ಸ್ಥಳದಲ್ಲಿ ಇದ್ದರು. ಮೊಜಣಿ ಮಾಡಿದ ನಂತರ ಗಡಿ ಗುರುತನ್ನು ತೋರಿಸಿದ್ದು ಇರುತ್ತದೆ. ಮೊಜಣಿ ಮಾಡಿದ ಮೇಲೆ ಕಚ್ಚಾ ನಕಾಶೆಯನ್ನು ಸ್ಥಳದಲ್ಲಿ ತಯಾರಿಸಿದ್ದು ಇರುವುದಿಲ್ಲ. ಸಾಕ್ಷಿಯು ಮುಂದುವರಿದು ಒಂದು ಗುಂಟೆ 2 ಆಣೆ ಜಾಗವನ್ನು ಪ್ರತಿವಾದಿಯವರು ಅತಿಕ್ರಮಣ ಮಾಡಿರುವ ಬಗ್ಗೆ ಭೂಮಾಕರು ತಿಳಿಸಿರುವುದಾಗಿ ನುಡಿದಿರುತ್ತಾರೆ. ದಾವಾ ಸ್ಥಳದ ಕಚ್ಚಾ ನಕಾಶೆಯನ್ನು ನಾನು ನೋಡಿದ್ದು ಇರುವುದಿಲ್ಲ. ವಾದಿಯವರ ತಂದೆಯವರ ಸಹೋದರರಾದ ಗಜಾನನ ನಾರಾಯಣ ಶೇಟ್ ರವರ ಪಾಲಿಗೆ ಬಂದ 9 ಗುಂಟೆ ಸ್ಥಳವನ್ನು ನನಗೆ ಮಾರಾಟ ಮಾಡಲಿಲ್ಲ ಎಂಬ ದ್ವೇಷದಿಂದ ವಾದಿಯವರೊಂದಿಗೆ ಸೇರಿ ಅವರ ಮೂಲಕ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ಥಳದ ಮೊಜಣಿಯನ್ನು ನಾನೇ ಮಾಡಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಜಾನನ ನಾರಾಯಣ ಶೇಟ್ ರವರ ಪಾಲಿಗೆ ಬಂದ ಸ್ಥಳದ ಸುತ್ತಲೂ ಅವರು ಪಗಾರ ಹಾಕಿದ್ದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸರ್ವೇ ನಂಬರ್.638/ಅ, ಹಿಸ್ಸಾ.2 ಬ ಮತ್ತು 2ಅ ರ ಮಧ್ಯೆದಲ್ಲಿರುವ ಪಗಾರವನ್ನು ನಾನೇ ಹಾಕಿದ್ದು ಇರುತ್ತದೆ ಎಂದು ನುಡಿದಿರುತ್ತಾರೆ. ನಾನು ಹೇಳಿರುವಂತೆ ಸರ್ವೇ ನಂಬರ್.638/ಅ, ಹಿಸ್ಸಾ.2 ಬ ಮತ್ತು 2ಅ ರ ಮಧ್ಯೆದಲ್ಲಿ ಯಾವುದೇ ಪಗಾರವನ್ನು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರ ತಂದೆಯವರು ಒಂದು ಗುಂಟೆ 8 ಆಣೆ ಜಾಗವನ್ನು ಖರೀದಿ ಮಾಡಿದ ನಂತರ ಅವರ ಹಾಗೂ ವಾದಿಯವರ ಜಾಗದ ನಡುವೆ ನಿಡಿ-4ರಂತೆ ಕಾಣಿಸುವ ಕೆಂಪು ಬಣ್ಣದ ಚಿರೇಕಲ್ಲನ್ನು ಇಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಡಿ-4ರಲ್ಲಿ ಕಾಣುವ ದಾರಿಯನ್ನು ಹೊರತು ಪಡಿಸಿ ಪ್ರತಿವಾದಿಯವ ಜಾಗಕ್ಕೆ ಹೋಗಲು ಬೇರ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯವರು ನಿಡಿ-4ರಲ್ಲಿ ತೋರಿಸಿದ ದಾರಿಯಲ್ಲೇ ಬಳಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ವಾದಿಯ ಹಕ್ಕಿನ ಸ್ಥಳವನ್ನು ಅತಿಕ್ರಮಿಸಿರುವುದು ಇರುವುದಿಲ್ಲ

ಎಂದರೆ ಸರಿಯಲ್ಲ. ನಾನು ಪ್ರತಿವಾದಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಪ್ರ.ದ.ನ್ಯಾ.ದಂ. ಕುಮಟಾ